ಶ್ರೀ ದೇವೇಂದ್ರಪ್ಪ ಘಾಳಪ್ಪ.—ಮಾನ್ಯ ಸದಸ್ಯರು ಹೇಳುವಂತೆ 20 ಸಾವಿರ ರೂಪಾಯಿ 1960 ರಲ್ಲಿ ಡಿಪಾಜಿಟ್ ಆಗಿದೆ. ಬೋರ್ಡ್ ಆಫ್ ಎಸಿಟ್ಸ್ ರೆಸಲ್ಯೂಷನ್ ಮಾಡಿ ಕಳುಹಿಸಿದ್ದಾರೆ. ಅದಕ್ಕೆ ತಗಲುವ ವೆಚ್ಚದಲ್ಲಿ 50 ಪರ್ಸೆಂಟ್ ಹಣವನ್ನು ಕೊಡಲು ತಾಲ್ಲೂಕು ಅಭಿವೃದ್ಧಿ ಮಂಡಲಿಯವರು ಒಪ್ಪಿಕೊಂಡಿದ್ದಾರೆ. ಇನ್ನು 50 ಪರ್ಸೆಂಟ್ ಮುನಿಸಿಪಾಲಿಟಿಯವರು ಕೊಡಬೇಕಾಗಿದೆ. ಈ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಕೆ. ಎಂ. ರುದ್ರಪ್ಪ.—ಕಾಫಿಬೋರ್ಡಿನವರು ಹಣ ಕೊಡುವುದಕ್ಕೆ ಮುಂದೆ ಬಂದಿದ್ದಾರೆ, ಸಾರ್ವಜನಿಕರೂ ಹಣ ಕೊಡುವುದಕ್ಕೆ ಸಿದ್ಧವಾಗಿದ್ದಾರೆ. ಆದ್ದರಿಂದ ಸಹಾನುಭೂತಿಯಿಂದ ಪರಿಶೀಲಿಸುತ್ತಾರೆಯೇ ?

ಶ್ರೀ ದೇವೇಂದ್ರಪ್ಪ ಘಾಳಪ್ಪ.—ಕಾಫಿಬೋರ್ಡಿನವರು ಹಣ ಕೊಡಲು ಮುಂದೆ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ. ಇರತಕ್ಕ 20,000 ರೂಪಾಯಿಗಳು ಮತ್ತು ಆ ದರ ಬಡ್ಡಿಯ ಜೊತೆಗೆ ತಾಲ್ಲೂಕು ಬೋರ್ಡ್ ಮತ್ತು ಮುನಿಸಿಪಾಲಿಟಿಯವರು ಕೊಡಬೇಕಾದ ಹಣವನ್ನು ಕೊಡುವ ಭರವಸೆಯನ್ನು ಕೊಟ್ಟಾಗ ಕೂಲಂಕಷವಾಗಿ ಪರಿಶೀಲಿಸಿ ಇದರ ಬಗ್ಗೆ ಯೋಗ್ಯ ಕ್ರಮ ಕೈಕೊಳ್ಳಲು ಸರ್ಕಾರ ಮುಂದೆ ಬರುತ್ತದೆ.

Formation of Gayathridevi Layout

342 **Sri K. SRIRAMULU** (Gandhinagar).—

Will the Minister for Law and Municipal Administration be please to state :—

(*a*) the date on which the Gavathridevi layout was formed, the number of corner and other sites in the layout formed ;

(*b*) the number of applications received from the Public for the sites in Gayathridevi Layout ; out of them the number of applications received for site number 66 ;

(*c*) whether corner site number 67 has been disposed ; if so, to whom it was allotted ; if not, the reason therefor ;

(*d*) whether Vayalikaval roads. and Palace Orchard roads are included as per the Gayatridevi layout plan ; if not, the persons responsible for laying the roads by violating the above plan ?

Sri D. K. NAIKAR (Minister for Law and Municipal Administration).—

(*a*) The Gayathridevi layout was formed on 21-12-1962. There were in all 107 sites—28 corner and 79 other sites in the said layout as formed then.

(*b*) 1 564·

2. For site No. 66 the application of only Smt. M. R. Lakashmi was received.

(*c*) Though site No. 67 was included in the plan of Gayathridevi Extension the same has been completely covered while forming 80 feet road from Bhashyam Circle. Site No. 67 is not in existence and hence not allotted to anybody.

(*d*) Yes.

ಶ್ರೀ ಕೆ. ಶ್ರೀರಾಮುಲು.—66ನೇ ನಂಬರ್ ಸೈಟಿಗೆ ಒಂದೇ ಒಂದು ಅರ್ಜಿ ಬಂದಿದೆ ಎಂದು ಉತ್ತರದಲ್ಲಿದೆ. 79 ಸೈಟುಗಳಿಗೆ 564 ಅರ್ಜಿಗಳು ಬಂದಿರುವಾಗ 66ನೇ ಸೈಟಿಗೆ ಒಂದೇ ಒಂದು ಅರ್ಜಿ ಬಂದಿರುವುದಕ್ಕೆ ಕಾರಣವೇನು ?

† ಶ್ರೀ ಡಿ. ಕೆ. ನಾಯ್ಕರ್.—ಕಾರಣವೇನೂ ಇಲ್ಲ. ಒಂದೇ ಒಂದು ಅರ್ಜಿ ಬಂದಿರುವುದರಿಂದ ಒಂದು ಎಂದು ಹೇಳಿದೆ.

ಶ್ರೀ ಕೆ. ಶ್ರೀರಾಮುಲು.—67ನೇ ನಂಬರ್ ಸೈಟನ್ನು ಯಾರಿಗೂ ಮಂಜೂರು ಮಾಡಿಲ್ಲವೆಂದು ಹೇಳಿದ್ದಾರೆ 66ನೇ ಸೈಟು ಮಾಲೀಕರು 67ನೇ ಸೈಟಿನಲ್ಲಿ 13 ಅಡಿ ಜಾಗವನ್ನು ಒತ್ತುವರಿಮಾಡಿ ಕಟ್ಟಡವನ್ನು ಕಟ್ಟಿಕೊಂಡಿದ್ದು ಆ 13 ಅಡಿ ಜಾಗವನ್ನು ತಮಗೇ ಕೊಡಬೇಕೆಂದು ಅರ್ಜಿ ಹಾಕಿಕೊಂಡಿದ್ದಾಗ್ಯೂ ಕೂಡ ಉತ್ತರಕೊಟ್ಟಿರುವುದು ಸರಿಯೇ ಸ್ವಾಮಿ ?

ಶ್ರೀ ಡಿ. ಕೆ. ನಾಯ್ಕರ್.—ಆ ವಿಚಾರ ಸರ್ಕಾರದ ಗಮನದಲ್ಲಿ ಬಂದಿಲ್ಲ.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು.—ಗಾಯತ್ರಿ ಲೇ ಔಟ್ ಮಾಡತಕ್ಕ ಕಾಲದಲ್ಲಿ ಹಿಂದಿನ ಮಹಾರಾಜರಿಂದ ಜಮೀನನ್ನು ತೆಗೆದುಕೊಂಡುವರ ಮೂಲ ಉದ್ದೇಶವೇನು ? ಮೂಲ ಉದ್ದೇಶವನ್ನು ಬಿಟ್ಟು ವ್ಯಾಪಾರಕ್ಕೆ ಇಳಿಯುವುದಕ್ಕೆ ಕಾರಣವೇನು ?

ಶ್ರೀ ಡಿ. ಕೆ. ನಾಯ್ಕರ್.—ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ಜಮೀನ್ನು ಆಕ್ಸೆ ಕ್ಯೂರ್ ಮಾಡಿ ನೋ ಪ್ರಾಫಿಟ್ ನೋ ಲಾಸ್ ಬೇಸಿಸ್ ಮೇಲೆ ಸೈಟುಗಳನ್ನು ಮಾಡಿ ಎಲ್ಲ ಅನುಕೂಲತೆಗಳನ್ನೂ ಒದಗಿಸಬೇಕಾದ್ದು ಮಾನ್ಯ ಸದಸ್ಯರಿಗೆ ಗೊತ್ತಿದೆ. ಕಾರ್ನರ್ ಸೈಟುಗಳನ್ನು ಮಾರಿ, ಬಾಕಿ ಸೈಟುಗಳನ್ನು ಹಂಚುವಂಥ ನಿಯಮವಿದೆ. ಆ ಪ್ರಕಾರ ಮಾಡಿದ್ದೇವೆ.

ಶ್ರೀ ಕೆ. ಶ್ರೀರಾಮುಲು.—ಸರ್ಕಾರದ ಗಮನಕ್ಕೆ ಬಂದಿಲ್ಲವೆಂದು ಹೇಳಿದರು. ಸರ್ಕಾರದ ಗಮನಕ್ಕೂ ಬಂದಿದೆ. ಟ್ರಸ್ಟ್ ಬೋರ್ಡ್ ಚೇರ್‌ಮನ್ ಅವರಿಗೆ ಎಂ. ಆರ್. ಲಕ್ಷ್ಮಿಯವರು ಅರ್ಜಿ ಕೊಟ್ಟು 67ನೇ ನಂಬರ್ ಸೈಟಿನಲ್ಲಿ 13 ಅಡಿ ಜಾಗವನ್ನು ಎನ್‌ಕ್ರೋಚ್ ಮಾಡಿದ್ದೇನೆ ಅದನ್ನು ಕೊಡಬೇಕೆಂದು ಕೇಳಿದ್ದಾರೆ. 67ನೇ ಸೈಟಿನಲ್ಲಿ ರಸ್ತೆ ಕೂಡ ಹೋಗುವ ಹಾಗೆ ಮಾಡಿದ್ದಾರೆ. ಇವರಲ್ಲಿ ನ್ಯೂನತೆ ಅಕ್ರಮ ನಡೆದಿದೆ. ಟ್ರಸ್ಟ್ ಬೋರ್ಡ್ ಆಸ್ತಿಯನ್ನು ಒಬ್ಬ ಸರ್ಕಾರಿ ಅಧಿಕಾರಿಯು ಹಂಡತಿಗೆ ಕೊಡಬೇಕೆಂದು ಸ್ಕೀಂ ನಡೆದಿದೆ. ಇದು ಅಕ್ರಮವೆಂದು ಕಂಡುಬಂದರೆ ಸರಿಪಡಿಸಲು ಪ್ರಯತ್ನ ಮಾಡುತ್ತಾರೆಯೇ ?

ಶ್ರೀ ಡಿ. ಕೆ. ನಾಯ್ಕರ್.—ರಸ್ತೆಯನ್ನು ನೇರವಾಗಿ ಮಾಡಿದಾಗ 67ನೇ ನಂಬರ್ ಸೈಟಿನಲ್ಲಿ ಅದು ಹೋಗಬೇಕಾಯಿತು. ಎಲ್ಲೋ ಸ್ವಲ್ಪ ಭಾಗ ಉಳಿದಿರಬಹುದು. ಹಾಗೆ ಇದ್ದಾಗ ಅವನ್ನು ಪಕ್ಕದ ಸೈಟಿನ ಮಾಲೀಕರಿಗೆ ಕೊಡುವಂಥ ಪದ್ಧತಿ ಇದೆ. ಆವಶ್ಯಕತವಾಗಿ ಅಥವಾ ಒಬ್ಬ ಅಧಿಕಾರಿಗಾಗಿ ಕೊಡಬೇಕೆಂದಿಲ್ಲ. ಪಕ್ಕದಲ್ಲಿರುವವರು ಯಾರೇ ಆಗಲಿ ಕೇಳಿದರೆ ಕೊಡುವಂಥ ಪ್ರಸಂಗ ಬರುತ್ತದೆ.

Percentage of Passes in S.S.L.C. Examination.

130. Sri K. H. HANUME GOWDA (Hassan).—
Will the Ministerfor Education be pleased to state :—

(*a*) the average pereentage of students getting through in the S.S.L.C. Examination during the years 1972-73 and 1973-74 appearing from government and private high schools in Hassan District ;

(*b*) the reasons for less number of students getting through the examination from some high schools ;

(*c*) the action taken against the teaching staff of the government and private high schools where the percentage of passing was less ;

(*d*) whether the government have given any incentive to the teaching staff of high schools having best results ?